ಟಿ.ಎಂ. ಮಾನಪ್ಪ, ಶಿವಮೊಗ್ಗ

*ಸತ್ತವರಿಗೆ ಮೇಲಕ್ಕೆ ಹೋದರು ಅನ್ನುವುದೇಕೆ?*



ತೊಂದರೆಗಳಿಂದ ಮುಕ್ತಿ ಹೊಂದಿದರೆಂದರೆ ಹಗುರವಾದರು ಎಂದರ್ಥ. ಹಗುರವಾದುದು ಮೇಲಕ್ಕೇ ಹೋಗುವುದು.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಬದಲಿ ಹೃದಯದಂತೆ ಬದಲಿ ಮಿದುಳು ಜೋಡಣೆ ಇದ್ದಿದ್ದರೆ?*

ಮೋದಿಯಿಂದ ವಿಪಕ್ಷದ ಉಪಾಧ್ಯಕ್ಷ ಪದೇ ಪದೇ ಲೇವಡಿಗೆ ಒಳಗಾಗುವುದು ತಪ್ಪುತ್ತಿತ್ತು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಸುಗ್ರೀವಾಜ್ಞೆ ಎಂದರೇನು?*

ಕೋತಿಗಳನ್ನು ಹತೋಟಿಯಲ್ಲಿ ಇರಿಸಿಕೊಳ್ಳಲು ಹೊರಡಿಸುವ ಫರ್ಮಾನು.

ಪೇಂಟರ್ ಪಾಪು, ಸಂತೇಮರಹಳ್ಳಿ

*ಜೀವನ ಸುಖಕರವಾಗಿರಬೇಕು ಎಂದರೆ ವಿದ್ಯಾಭ್ಯಾಸ ಮುಖ್ಯವಾದ ಅಸ್ತ್ರವೆನ್ನುತ್ತಾರೆ. ನಿಜವೆ?*



ಸಾಲುಮರದ ತಿಮ್ಮಕ್ಕ ಗ್ರಾಜುಯೇಟೆ? ಸುಖಕ್ಕೆ ಅಗತ್ಯವಾದುದು ಸರ್ಟಿಫಿಕೇಟಲ್ಲ, ತೃಪ್ತಿ.

ಡೈರಿ ವಿಶ್ವನಾಥ್, ಬೆಂಗಳೂರು

*ರಾಜಮಾರ್ಗ ಯಾವುದು? ಎಲ್ಲಿದೆ?*

ರಾಜಕಾಲುವೆಗಳ ಒತ್ತುವರಿ ಮಾಡಿಕೊಳ್ಳುವುದೇ ರಾಜಮಾರ್ಗ; ನಗರಗಳ ವಾಣಿಜ್ಯ ಕ್ಷೇತ್ರಗಳಲ್ಲಿ ಇವೆ.

ಫ್ಯಾಷನ್ ಡಿಸೈನರ್ ಮಧು, ಹಾಸನ

*ಬಡ್ಡಿ ವ್ಯವಹಾರ ನಡೆಸುವವರು ಯಾವಾಗಲೂ ಮೈ ತುಂಬಾ ಚಿನ್ನದ ಆಭರಣ ಹೇರಿಕೊಳ್ಳುವುದೇಕೆ?*

ಕಸುಬನ್ನು ಸೂಚಿಸಲು– ಕುತ್ತಿಗೆ ಹಿಡಿಯುವವೆನ್ನಲು ಸರ; ಸುತ್ತಿಕೊಳ್ಳುವವೆನ್ನಲು ರಿಂಗ್; ಬಗೆದೇವೆನ್ನಲು ಹುಲಿಯುಗುರು...

ಪಿ.ಜೆ. ರಾಘವೇಂದ್ರ, ಮೈಸೂರು

*ಕೆರೆ, ಕಟ್ಟೆ, ಜಲಾಶಯಗಳನ್ನು ನಿರ್ಮಿಸುವ ಶಕ್ತಿ ಈಗಿನವರಿಗೇಕಿಲ್ಲ?*

ಕೆರೆಕೆರೆದು ಕಟ್ಟುಕಟ್ಟೇ ನುಂಗಿ ತಮ್ಮ ಆಶಯಗಳ ಪೂರೈಕೆಗೆ ಆದ್ಯತೆ ನೀಡುತ್ತಿರುವುದರಿಂದ.

ಪಿ.ಎಸ್. ಶ್ರೀವತ್ಸ, ಬೆಂಗಳೂರು

*ಮಧ್ಯರಾತ್ರಿ ಸ್ವಾತಂತ್ರ್ಯ ಗಳಿಸಿದ್ದಕ್ಕೂ, ಮಧ್ಯರಾತ್ರಿ ಜಿಎಸ್‌ಟಿ ಹೇರಿದ್ದಕ್ಕೂ ಏನಾದರೂ ವ್ಯತ್ಯಾಸವಿದೆಯಾ?*

ಅಂದು ಬಿಳಿ ತೊಲಗಿತು; ಇಂದು ಕಪ್ಪು ತೊಲಗಿತು.

ವಿದ್ಯಾ ಎನ್. ಪೈ, ಕಾಸರಕೋಡ

*ಖಾಸಗಿ ಬಸ್‌ಗಳ ಮಿತಿ ಮೀರಿದ ವೇಗಕ್ಕೆ ಬ್ರೇಕ್ ಹಾಕುವುದು ಹೇಗೆ?*

ಚಿಂತೆ ಬೇಡ. ರಸ್ತೆಗಿಂತ ಹೆಚ್ಚು ಹಳ್ಳಗಳನ್ನು ನಿರ್ಮಿಸಿ ವೇಗ ತಗ್ಗಿಸುವ ಸರ್ಕಾರ ಈಗ ಜಾರಿಯಲ್ಲಿದೆ.

ಹೆಚ್.ಎಂ. ಅನಂತಪದ್ಮನಾಭ, ಮೈಸೂರು

*ರಾಜಕಾರಣಿಗಳ ಗಂಟಲು ಸಿಮ್‌ಕಾರ್ಡಿನ ಸಹಾಯದಿಂದ ಮಾತನಾಡುವಂತಿದ್ದರೆ ಹೇಗಿರುತ್ತಿತ್ತು?*

ಭ್ರಷ್ಟ ನುಡಿಗಳು ಆಗಾಗ್ಗೆ ಹೊರಡುವ ಕಾರಣ ಸಿಮ್ ಕರಪ್ಟ್ ಆಗುತ್ತಿತ್ತು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಕವಿಗೆ ಕಲ್ಪನೆ ಮುಖ್ಯವೋ, ಅನುಭವ ಮುಖ್ಯವೋ, ಓದು ಮುಖ್ಯವೋ?*

ಹೃದಯ ಮುಖ್ಯ; ಮಿಡಿತವಿಲ್ಲದ ಕವನ ಮಿಡತೆಯ ಕ್ರೀಚ್ ಕ್ರೀಚ್‌ಗೆ ಸಮ.

ಸುಂದರ್, ಬೆಂಗಳೂರು

*ಸಾಹಿತ್ಯವರಿಯದ ಸಾಹಿತಿ, ಕವಿತೆ ಅರಿಯದ ಕವಿಯನ್ನು ಯಾವುದಕ್ಕೆ ಹೋಲಿಸಬಹುದು?*

ಸಂಸ್ಕೃತಿ ಅರಿಯದ ಸಂಸ್ಕೃತಿ ಇಲಾಖೆಯ ಮುಖ್ಯಸ್ಥರಿಗೆ.

## ಬಹುಮಾನಿತ ಪ್ರಶ್ನೆ

ರವಿ ಎಂ. ಪೈ, ಹೊನ್ನಾವರ

*ಗರ್ಲ್ ಫ್ರೆಂಡ್‌ಗೂ ಆಧಾರ್ ಲಿಂಕ್ ಮಾಡಬೇಕೆ?*

ಅಗತ್ಯವಿಲ್ಲ. ನಿಮಗೇ ಆಧಾರವಿಲ್ಲವೆಂದು ತಿಳಿದರೆ ಅವಳು ತಾನಾಗಿಯೇ ಡಿಲಿಂಕ್ ಆಗುತ್ತಾಳೆ.

ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

*ನಿಮಗೊಂದು ಸೂಟ್‌ಕೇಸ್ ಸಲ್ಲಿಸಬೇಕೆಂದಿದ್ದೇನೆ. ಯಾವಾಗ ಸ್ವೀಕರಿಸುತ್ತೀರಿ?*

ನಿಜಕ್ಕೂ ಪ್ರಯೋಜನವಾಗಬೇಕೆಂದರೆ ಸೂಟ್ ಮೋದಿಗೆ ಕೊಡಿ; ಕೇಸ್ ಲಾಯರ್‌ಗೆ ಕೊಡಿ.

ರತ್ನಜ, ಮೈಸೂರು

*ನಮಸ್ಕಾರ ಮಾಡುವ ಮೊದಲೇ ಆಶೀರ್ವಾದ ಸಿಕ್ಕಿಬಿಟ್ಟರೆ?*

ಅದನ್ನು ಮೀಸಲಾತಿ ಎಂದು ಕರೆಯಲಾಗುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು

*ಇಲ್ಲೊಬ್ಬ ಡಾಕ್ಟರ್ ಕುಡುಕರಿಗೆ ಆಯಸ್ಸು ಜಾಸ್ತಿ ಎನ್ನುತ್ತಾನಲ್ಲಾ...?*



ಇರಬಹುದು. ಕುಡಿದು ಮೋರಿಯಲ್ಲಿ ಬೀಳುವುದರಿಂದ ರಸ್ತೆ ಅಪಘಾತದಿಂದ ತಪ್ಪಿಸಿಕೊಳ್ಳುವರಲ್ಲ!

ಉಷಾ ಸೋಗಲ್, ಬೆಂಗಳೂರು

*ಆ ಭಗವಂತನೇ ಈ ನೆಲದಲ್ಲಿ ಅವತಾರವೆತ್ತಿದರೂ ನಮ್ಮ ದೇಶ ಉದ್ಧಾರವಾಗಿಲ್ಲ. ಏಕೆ?*

ಪ್ರತಿ ಅವತಾರಕ್ಕೆ ನೂರಾರು ರಕ್ಕಸರಿದ್ದರಲ್ಲ; ಭಗವಂತನ ಸಂತತಿ ಬೆಳೆಯಲಿಲ್ಲ, ರಕ್ಕಸರು ಬೆಳೆದರು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಆರ್.ಟಿ.ಇ. ಕೋಟಾದಲ್ಲಿ ಸೀಟು ಪಡೆದು ಸ್ಕೋಡಾ, ಬೆಂಝ್ ಕಾರುಗಳಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸುವವರಿಗೆ ಏನೆನ್ನಬೇಕು?*

ಏನು ಬೇಕಾದರೂ ಅನ್ನಿ; ಅವರಿಗೆ ಕೇಳದಂತೆ ಅನ್ನಿ; ಕೊಳೆಯುವ ಹಣ ಇರುವವರಿಗೆ ಕೊಳಕು ಬುದ್ಧಿ ಹೆಚ್ಚು.

■ ರಾಮ್